

ಕೆ.ಟಿ. ಗಟ್ಟಿಯವರು ಎದುರಾದರು. ನನಗೆ ಅದೊಂದು ವಿಚಿತ್ರ ಸನ್ನಿವೇಶ. ಹೈಸ್ಕೂಲು, ಪಿಯುಸಿ ಓದುತ್ತಿರುವಾಗ ಲೇಖಕರು, ಸಾಹಿತಿಗಳು ಎಂದರೆ ಏನೋ ಗೌರವ, ಅಭಿಮಾನ, ಭಯ. ಅವರೆಲ್ಲ 'ಭಯಂಕರ' ತಲೆಯವರು ಎಂಬ ಭಾವ. ಅವರ ಹಾಗೆ ನಾನೂ ಆಗಬೇಕೆಂಬ ಆಸೆ. ಯಾರಾದರೂ ಲೇಖಕರು ನನ್ನ ಪತ್ರಕ್ಕೆ ಪ್ರತ್ಯುತ್ತರ ಬರೆದರೆ ನಾನೂ ಏನೋ ಸಂಥಿಂಗ್ ಎನ್ನುವ ಕೋಡು! ಅವರನ್ನು ಎಂದಾದರೂ ಕಂಡೇನೆ, ಮಾತನಾಡಿಸಿಯೇನೆ... ಕನಸು. ಕೆ.ಟಿ. ಗಟ್ಟಿ ನನಗೆ ಅಂಥ ಒಬ್ಬರು. ನಲವತ್ತೆಂಟು ಕಾದಂಬರಿಗಳು, ಐದು ಕಥಾಸಂಕಲನಗಳು, ಏಳು ಲೇಖನ ಸಂಗ್ರಹಗಳು, ಶಿಕ್ಷಣ, ಭಾಷಾಧ್ಯಯನ ಇತ್ಯಾದಿ ಕುರಿತಂತೆ ಹದಿಮೂರು ಕೃತಿಗಳು, ಹದಿನೆಂಟು ನಾಟಕಗಳು, ಹದಿನಾರು ಬಾನುಲಿ ನಾಟಕಗಳು, ಮುವ್ವತ್ತೆರಡು ಮಕ್ಕಳ ನಾಟಕಗಳು, ಆತ್ಮ ಚರಿತ್ರೆ, ವ್ಯಕ್ತಿಚಿತ್ರ, ತುಳು ಕೃತಿಗಳು, ಇಂಗ್ಲಿಷ್ ಕೃತಿಗಳು, ಪ್ರವಾಸ ಸಾಹಿತ್ಯ, ಕವನ ಸಂಕಲನಗಳು ಹೀಗೆ ಕೆ.ಟಿ. ಗಟ್ಟಿಯವರೆಂದೇ ಜನಜನಿತರಾದ ಕೂಡ್ಲು ತಿಮ್ಮಪ್ಪ ಗಟ್ಟಿಯವರದು ಕತೆ ಕಾದಂಬರಿಗಳಿಗೆ ಸೀಮಿತವಾದ ಲೇಖನಿಯಲ್ಲ. ಅಂತೆಯೇ ಪುತ್ತೂರು ಕರ್ನಾಟಕ ಸಂಘದವರು